ಆ) ಆಹ್ವಾನಿಸಿದ ಪೂರ್ವಾರ್ಹತೆ ಟೆಂಡರ್ ಪ್ರಕ್ರಿಯೆಯನ್ನು ಲೋಕಸಭಾ ಮತ್ತು ರಾಜ್ಯ ಸಭಾ ಚುನಾವಣೆಗಳು ಪೂರ್ಣಗೊಂಡ ನಂತರ ದಿನಾಂಕ 6–5–04 ರಂದು ಟೆಂಡರ್‌ಗಳು ಪರಿಶೀಲನೆಯಲ್ಲಿದೆ.

ಇ) ಯೋಜನೆಗೆ ಸೂಕ್ತ ಅನುದಾನವನ್ನು ಒದಗಿಸಿಕೊಂಡು ಪ್ರಸ್ತಾಪಿತ ಯೋಜನೆಯನ್ನು 24 ತಿಂಗಳುಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

593(853) : ಶ್ರೀ ನಿಂಗಪ್ಪ ಹೆಚ್. (ಕುಣಿಗಲ್) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅತೀ ವೃಷ್ಟಿಯಿಂದ ಕುಣಿಗಲ್ ಕ್ಷೇತ್ರದ ಗುನ್ನಾಗೆರೆ ನೀರು ಊರೊಳಗೆ ನುಗ್ಗಿ ಸುಮಾರು ಮನೆಗಳಿಗೆ ಜಖಂ ಆಗಿರುವುದಲ್ಲದೆ, ಆಹಾರ ಧಾನ್ಯಗಳು ಕೊಚ್ಚಿಹೋಗಿ ಅಪಾರ ನಷ್ಟವಾಗಿರುವುದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಸೇರಿರುವ ಈ ಕೆರೆಯ ಹಿಂಭಾಗದ ಸಂತಸ್ಥರಿಗೆ ನಿಗಮದ ವತಿಯಿಂದ ಪರಿಹಾರ ಇದುವರೆವಿಗೂ ನೀಡದಿರಲು ಕಾರಣಗಳೇನು;

ಇ) ನೀಡುವುದಿದ್ದಲ್ಲಿ, ಪರಿಹಾರವನ್ನು ಯಾವಾಗ ನೀಡಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ದಿನಾಂಕ 9–7–04 ರಂದು ಬಿದ್ದ ಭಾರಿ ಮಳೆಯಿಂದಾಗಿ ಕುಣಿಗಲ್ ಕ್ಷೇತ್ರದ ಗುನ್ನಾಗೆರೆ ಕೆರೆಯ ನೀರು ಊರೊಳಗೆ ನುಗ್ಗಿ 15 ಮನೆಗಳಿಗೆ ಜಖಂ ಆಗಿರುತ್ತದೆಂದು ಪರಿಹಾರದ ಸಂಬಂಧ ರೂ.61,800.00 ಗಳಾಗುತ್ತದೆಂದು ತಹಶೀಲ್ದಾರ್ ಕುಣಿಗಲ್‌ರವರು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆ) ಪ್ರಕೃತಿ ವಿಕೋಪದ ಸಂತ್ರಸ್ತರಿಗೆ ನಿಗಮದ ವತಿಯಿಂದ ಪರಿಹಾರ ನೀಡಲು ಅವಕಾಶವಿರುವುದಿಲ್ಲ. ಅನಾಹುತಗಳನ್ನು ತಪ್ಪಿಸಲು ಕೆರೆಯ ಕೋಡಿ ಮತ್ತು ಡ್ರಾಪ್ಟ್ ಚಾನಲ್ ಅಭಿವೃದ್ಧಿಕೈಗೊಳ್ಳಲು ನಿಗಮದವತಿಯಿಂದ ತಾತ್ಕಾಲಿಕ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ ಹಾಗೂ ಶಾಶ್ವತ ದುರಸ್ತಿಗಾಗಿ ನಿಗಮದಿಂದ ಕಾರ್ಯಕ್ರಮಕ್ಕೆ ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಇ) ಅತಿ ವೃಷ್ಟಿಗೆ ಒಳಗಾದ ಸಂತ್ರಸ್ಥರನ್ನು ಗುರ್ತಿಸಿ ಜಿಲ್ಲಾಡಳಿತವು ಪರಿಹಾರ ನೀಡಬೇಕಾಗಿರುತ್ತದೆ. ತಹಶೀಲ್ದಾರರು, ಕುಣಿಗಲ್‌ರವರು ಜಿಲ್ಲಾಧಿಕಾರಿಗಳಿಗೆ ಮಂಜೂರಾತಿ ಬಗ್ಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಜಿಲ್ಲಾಧಿಕಾರಿಗಳಿಂದ ಮಂಜೂರಾತಿ ಪಡೆದ ನಂತರ ತಹಶೀಲ್ದಾರ್ ಕುಣಿಗಲ್‌ರವರು ಪರಿಹಾರ ವಿತರಿಸಬೇಕಾಗುತ್ತದೆ.

594(189) : ಶ್ರೀ ಪದ್ಮನಾಭ ಕೊಟ್ಟಾರಿ (ವಿಟ್ಲ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಗಳೂರು ಬಿ.ಸಿ. ರೋಡ್, ಪುತ್ತೂರು, ಸುಳ್ಯ, ಧರ್ಮಸ್ಥಳ ಮುಂತಾದ ಕೆಲವು ಮಾರ್ಗಗಳಲ್ಲಿ ಖಾಸಗಿ ಕಂಟ್ರಾಕ್ಟ್ ಕ್ಯಾರಿಯೇಜ್ ಬಸ್ಸುಗಳಿಗೆ ಪರವಾನಿಗೆ ನೀಡಿರುವುದು ನಿಜವೇ;